ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/51/ಪಿಹೆಚ್‌ಡಿ/ನೈಜತೆ/2023-24/ಬಸ್ಥಾವಿ　　ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 16.10.2023

## ಸುತ್ತೋಲೆ

ವಿಷಯ: ಹೊರರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಪಡೆದಿರುವ ಪಿಹೆಚ್‌ಡಿ ಪದವಿಯ ನೈಜತೆ ವರದಿ ಪಡೆಯಲು ಪರಿಶೀಲನಾ ಶುಲ್ಕ ಪಾವತಿಸುವ ಬಗ್ಗೆ.

ಉಲ್ಲೇಖ: ಇ-ಕಡತ ಸಂಖ್ಯೆ:1175158ರಲ್ಲಿ ಸರ್ಕಾರದ ಅನುಮೋದನೆ.

** ** **

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ/ಸಹ ಪ್ರಾಧ್ಯಾಪಕರು/ಗ್ರಂಥಪಾಲಕರು/ದೈಹಿಕ ಶಿಕ್ಷಣ ನಿರ್ದೇಶಕರಿಗೆ ಸಿ.ಎ.ಎಸ್ ಅಡಿಯಲ್ಲಿ ವಿವಿಧ ಶೈಕ್ಷಣಿಕ ಹಂತದ ಸ್ಥಾನೀಕರಣಗಳನ್ನು {ಶೈಕ್ಷಣಿಕ ಹಂತ 11 (ಎಜಿಪಿ ರೂ.7000/-), ಶೈಕ್ಷಣಿಕ ಹಂತ 12 (ಎಜಿಪಿ ರೂ.8000/-), ಶೈಕ್ಷಣಿಕ ಹಂತ 13ಎ (ಎಜಿಪಿ ರೂ.9000/-), ಮತ್ತು ಶೈಕ್ಷಣಿಕ ಹಂತ 14 (ಎಜಿಪಿ ರೂ.10000/-) ಮಂಜೂರು ಮಾಡಲಾಗುತ್ತಿದೆ. ಪಿಹೆಚ್‌ಡಿ/ಎಂಫಿಲ್ ಪದವಿಯ ಮೇರೆಗೆ ಸ್ಥಾನೀಕರಣದಲ್ಲಿ ಸೇವಾ ವಿನಾಯಿತಿ ಕೋರುವ ಹಾಗೂ ಎಜಿಪಿ ಮಂಜೂರಾತಿಗಾಗಿ ಪಿಹೆಚ್.ಡಿ ಕಡ್ಡಾಯ ಪ್ರಕರಣಗಳಲ್ಲಿ ಹೊರರಾಜ್ಯಗಳಿಂದ ಪಡೆದಿರುವ ಪಿಹೆಚ್‌ಡಿ/ಎಂಫಿಲ್ ಪದವಿಗಳ ನೈಜತೆ ಪ್ರಮಾಣಪತ್ರಕ್ಕೆ ತಗಲುವ ಶುಲ್ಕವನ್ನು ಇಲ್ಲಿಯವರೆಗೆ ಇಲಾಖೆಯ ಮುಖಾಂತರ ಸಂಬಂಧಿಸಿದ ವಿಶ್ವವಿದ್ಯಾಲಯಕ್ಕೆ ಪಾವತಿಸಿ ನೈಜತೆ ಪ್ರಮಾಣಪತ್ರವನ್ನು ಪಡೆಯಲಾಗುತ್ತಿತ್ತು.

ಉಲ್ಲೇಖಿತ ಇ-ಕಡತದಲ್ಲಿ ಸರ್ಕಾರ ಅನುಮೋದಿಸಿರುವಂತೆ ಹೊರರಾಜ್ಯಗಳಲ್ಲಿ ಪಿಹೆಚ್‌ಡಿ/ಎಂಫಿಲ್ ಪದವಿ ಪಡೆದಿರುವ ಭೋಧಕರು ಸ್ಥಾನೀಕರಣಕ್ಕೆ ಪ್ರಸ್ತಾವನೆ ಸಲ್ಲಿಸುವ ಸಂದರ್ಭದಲ್ಲಿ ಹೊರ ರಾಜ್ಯಗಳ ವಿಶ್ವವಿದ್ಯಾಲಯಗಳು ನಿಗದಿಪಡಿಸಿರುವ ನೈಜತೆ ಪ್ರಮಾಣಪತ್ರ ಶುಲ್ಕವನ್ನು ಡಿ.ಡಿ ಅಥವಾ ಆನ್‌ಲೈನ್ ಮುಖಾಂತರ ಪಾವತಿಸಿ ಸಂಬಂಧಿಸಿದ ದಾಖಲೆಗಳೊಂದಿಗೆ (Valid Period Demand Draft) ಮಾಹಿತಿಯನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಪತ್ರದೊಂದಿಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು. ಸಲ್ಲಿಸಿರುವ ಮಾಹಿತಿ ಹಾಗೂ ವಿವರಗಳು ಸಂಬಂಧಿಸಿದ ವಿಶ್ವವಿದ್ಯಾಲಯಗಳು ನಿಗದಿ ಪಡಿಸಿರುವ ಶುಲ್ಕಕ್ಕೆ ತಾಳೆಯಾದಲ್ಲಿ, ವಿಶ್ವವಿದ್ಯಾಲಯಗಳಿಂದ ನೈಜತೆ ಪ್ರಮಾಣಪತ್ರವನ್ನು ಪಡೆಯಲು ಈ ಕಛೇರಿಯಿಂದ ಕ್ರಮವಹಿಸಲಾಗುವುದು.

ಈಗಾಗಲೇ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಮೇಲ್ಕಂಡಂತೆ ಕ್ರಮವಹಿಸಿ ದಾಖಲೆಯನ್ನು (DD/Online ದಾಖಲೆ) ಈ ಕಛೇರಿಗೆ ಪ್ರಾಂಶುಪಾಲರ ಪತ್ರದೊಂದಿಗೆ ಸಲ್ಲಿಸುವುದು. ಶೈಕ್ಷಣಿಕ ಹಂತ 13ಎ / 14 (ಎಜಿಪಿ ರೂ.9000/- & ರೂ 10000/-)ಗೆ ಅರ್ಹರಾದ ಈಗಾಗಲೇ ಪ್ರಸ್ತಾವನೆ ಸಲ್ಲಿಸಿರುವ ಬೋಧಕರು ಸಂದರ್ಶನಕ್ಕೆ ಹಾಜರಾಗುವ ಸಂದರ್ಭದಲ್ಲಿ ದಾಖಲೆಗಳೊಂದಿಗೆ (DD/Online ದಾಖಲೆ) ಮೇಲ್ಕಂಡ ಶುಲ್ಕಪಾವತಿ ವಿವರಗಳ ಮಾಹಿತಿಯನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರ ಪತ್ರದೊಂದಿಗೆ ಈ ಕಛೇರಿಗೆ ಸಲ್ಲಿಸತಕ್ಕದ್ದು.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಪ್ರತಿ:

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಪ್ರಾದೇಶಿಕ ಜಂಟಿ ನಿರ್ದೇಶಕರ ಮುಖಾಂತರ.
3. ಮಾಹಿತಿ ಅಧಿಕಾರಿಗಳು ಮಾಹಿತಿ ತಂತ್ರಜ್ಞಾನ ವಿಭಾಗ ಕೇಂದ್ರ ಕಛೇರಿ ಬೆಂಗಳೂರು-ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ